ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಕುಡಿಯಲು ನೀರು ಕೇಳಿದರೆ ಟೂ ಮಚ್ ಹೇಗೆ ಆಗುತ್ತದೆ?

ಅಧ್ಯಕ್ಷರು: ನೀವು ಕುಳಿತುಕೊಳ್ಳಿ, ಬಾಲರಾಜ್ ಅವರೇ ನಿಮ್ಮ ಪ್ರಶ್ನೆಯನ್ನು ಕೇಳಿ.

ಬೆಂಗಳೂರು ಎನ್.ಜಿ.ಈ.ಎಫ್ ಬಡಾವಣೆಯಲ್ಲಿ ನೀರಿನ ಸಮಸ್ಯೆ

345(4282) ಶ್ರೀ ಬಾಲರಾಜ್ ಎಸ್.(ಕೊಳ್ಳೇಗಾಲ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಎನ್.ಜಿ.ಇ.ಎಫ್ ಬಡಾವಣೆಯ ವಾರ್ಡ್‌ನಂ.84ರ ಸದಾನಂದನಗರ, 8ನೇ ಮುಖ್ಯ ರಸ್ತೆ ನಿವಾಸಿಗಳಿಗೆ ಬೆಂಗಳೂರು ನೀರು ಸರಬರಾಜು ಮಂಡಳಿಯವರು ನೀರು ಬಿಡದೆ ಕಿರುಕುಳ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸದರಿ ಮುಖ್ಯ ರಸ್ತೆಗಳಲ್ಲಿರುವ (100:ಎ) ವಸತಿಗಳ ನೀರಿನ ಸಂಪರ್ಕ ಕಲ್ಪಿಸಿದ್ದರೂ ಹಲವಾರು ತಿಂಗಳುಗಳಿಂದ ನೀರು ಪೂರೈಕೆ ಇಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ ಈಗಲಾದರೂ ಕೂಡಲೇ ಸದರಿ ವಸತಿಗಳಿಗೆ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)–

ಅ) ಇಲ್ಲ.

ಆ) ಸದಾನಂದ ನಗರದ 8ನೇ ಮುಖ್ಯರಸ್ತೆಗೆ ನೀರು ಸರಬರಾಜು ಸರಿಯಾಗಿ ಮಾಡಲಾಗುತ್ತಿದೆ. ಆದರೆ 100/ಎ ವಸತಿಯ 8ನೇ ಮುಖ್ಯ ರಸ್ತೆಯ ಅಡ್ಡರಸ್ತೆಯಲ್ಲಿ ಇರುವ ಈ ಒಂಟಿ ಮನೆ ಇದ್ದು ಸಮರ್ಪಕವಾಗಿ ಕಲ್ಪಿಸಿದ್ದರೂ ಎತ್ತರವಾದ ಪ್ರದೇಶದಲ್ಲಿದ್ದುದರಿಂದ ಸರಿಯಾಗಿ ನೀರು ಸರಬರಾಜು ಆಗುತ್ತಿರಲಿಲ್ಲ. ಇದನ್ನು ಸರಿಪಡಿಸಿ ಸದರಿ ವಸತಿಗೆ ಸರಿಯಾದ ನೀರು ಸರಬರಾಜು ನೀಡಲಾಗಿದೆ.

ಶ್ರೀ ಎಸ್.ಬಾಲರಾಜ್: ಮಾನ್ಯ ಅಧ್ಯಕ್ಷರೇ, ಒಂದು ಬಡಾವಣೆಯ ಒಂದು ಮುಖ್ಯರಸ್ತೆಯಲ್ಲಿಯ ಸುಮಾರು ಕುಟುಂಬಗಳಿಗೆ ನೀರು ನಿರ್ವಹಣೆಯನ್ನು ಮಾಡುತ್ತಿಲ್ಲವೆಂದು ಹೇಳಿ ನೀರು ಸರಬರಾಜು ಮಂಡಳಿಗೆ ಸುಮಾರು ಐದು ಮನವಿಗಳನ್ನು ಸಲ್ಲಿಸಿದ್ದರೂ ಕೂಡ ಯಾವುದೇ

ಕಾರ್ಯವನ್ನು ಕೈಗೊಳ್ಳದೇ ಇಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಇದು ನಿಜಕ್ಕೂ ನೋವಿನ ಸಂಗತಿ. ಜೊತೆಗೆ ಈ ಬಡಾವಣೆಯಲ್ಲಿ ಸುಮಾರು 8 ಕುಟುಂಬಗಳು ನನ್ನ ಹತ್ತಿರ ಬಂದು ನಮಗೆ ನೀರು ಒದಗಿಸುತ್ತಿಲ್ಲ, ಮಂಡಳಿಯವರಿಗೆ ಹಣವನ್ನು ನೀಡಿದರೆ ಅಥವಾ ಏನಾದರೂ ಲಂಚವನ್ನು ನೀಡಿದರೆ ಮಾತ್ರ ಆ ಕಾರ್ಯವನ್ನು ಕೈಗೊಂಡು ನೀರು ಒದಗಿಸುತ್ತಾರೆ ಎಂಬ ಅಂಶವನ್ನು ತಿಳಿಸಿದ್ದಾರೆ. ಇದನ್ನು ನೋಡಿದರೆ ನಮಗೆ ನೋವಾಗುತ್ತದೆ. ಕುಡಿಯುವ ನೀರನ್ನು ಕೊಡುವುದಕ್ಕಾಗಿ ಯಾವ ಸರ್ಕಾರವಿದೆ, ಅಂತಹ ಕುಡಿಯುವ ನೀರನ್ನು ಕೊಡತಕ್ಕಂಥ ಸಂದರ್ಭದಲ್ಲಿ ಮಂಡಳಿಯ ಅಥವಾ ಇಲಾಖಾಧಿಕಾರಿಗಳು ಹಣಕ್ಕೋಸ್ಕರ ಒಂದು ಬಡಾವಣೆಗೆ ನೀರು ನಿಲ್ಲಿಸುತ್ತಾರೆಂದರೆ ಇದು ದುರಂತ. ಅದರ ಬಗ್ಗೆ ಕೂಡಲೇ ಕಾನೂನು ರೀತಿಯ ಕ್ರಮ ಜರುಗಿಸಿ ಸಂಬಂಧಪಟ್ಟವರ ಮೇಲೆ ಕ್ರಮ ಕೈಗೊಂಡು ಆದಷ್ಟು ಜಾಗ್ರತೆ ನೀರು ಒದಗಿಸಿಕೊಡುವ ನಿಟ್ಟಿನಲ್ಲಿ ಈ ಕಾರ್ಯವನ್ನು ಕೈಗೊಳ್ಳಬೇಕು. ಇದು ಕೇವಲ ಒಂದು ಬಡಾವಣೆಯ ಸಮಸ್ಯೆಯಲ್ಲ. ಇಡೀ ನಗರ, ಪಟ್ಟಣ ಮತ್ತು ಎಲ್ಲಾ ವ್ಯಾಪ್ತಿಗೂ ಸೇರುವಂಥಹ ವಿಚಾರ, ಇಂತಹ ಯಾವುದೇ ಕಿರುಕುಳ, ತೊಂದರೆಗಳಿದ್ದರೂ ಸಹ ಅದರ ಬಗ್ಗೆ ಕಾನೂನು ರೀತಿಯ ಕ್ರಮ ವಹಿಸಿ ನೀರನ್ನು ಕೊಡಲಿಕ್ಕೆ ಆದ್ಯತೆ ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಎನ್‌ಜಿಇಎಫ್ ಬಡಾವಣೆಯಲ್ಲಿರತಕ್ಕಂತಹ 84 ಮನೆಗಳಿಗೆ ನೀರು ತಲುಪುತ್ತಿಲ್ಲವೆಂದು ಮಾನ್ಯ ಬಾಲರಾಜ್ ಅವರು ಹೇಳುತ್ತಿದ್ದಾರೆ. ನಿಮ್ಮ ಪ್ರಶ್ನೆ ಬಂದ ಮೇಲೆ ನಮ್ಮ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧ್ಯಕ್ಷರು ಮತ್ತು ಚೀಫ್ ಎಂಜಿನಿಯರ್ ಅವರು ಹೋಗಿ ನೋಡಿದ್ದಾರೆ, ವಾಲ್ವ್‌ನಲ್ಲಿ ಸ್ವಲ್ಪ ರೀ ಅಡ್ಜೆಸ್ಟ್‌ಮೆಂಟ್ ಮಾಡಿದ್ದಾರೆ ಮತ್ತು ಈಗ ನೀರು ಹೋಗಲಿಕ್ಕೆ ವ್ಯವಸ್ಥೆಯನ್ನು ಮಾಡಿದ್ದಾರೆ.

ತ್ವರಿತ ನ್ಯಾಯಲಯ ಸ್ಥಾಪನೆ

335(4046) ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ)– ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಾಡಿ ಉತ್ತರಿಸುವರೆ?

ಅ) ಫಾಸ್ಟ್ ಟ್ರಾಕ್ ನ್ಯಾಯಾಲಯಗಳ ಸ್ಥಾಪನೆಗೆ ಇರಬಹುದಾದ ಆರ್ಥಿಕ ನೀತಿ ನಿಯಮಗಳೇನು?